# ಶ್ರೀರಾಮಕೃಷ್ಣರ ಅಪ್ರಸಿದ್ಧ ಭಕ್ತರು

ಸ್ವರ್ಣಗೌರಿ

(ಹಿಂದಿನ ಸಂಚಿಕೆಯಿಂದ)

ಒರಿಸ್ಸಾ ದೇಶದ ಒಂದು ಹಳ್ಳಿಯಲ್ಲಿ ಜನಿಸಿದ ಭಗವಾನ್ ದಾಸ್ ಬಾಬಾಜಿ ಹದಿಹರೆಯದ ಯುವಕನಾಗಿದ್ದಾಗಲೇ ಕಾಲ್ನಡಿಗೆಯಲ್ಲಿ ಬೃಂದಾವನಕ್ಕೆ ಹೋಗಿ ಸುಪ್ರಸಿದ್ಧ ಕೃಷ್ಣದಾಸ ಬಾಬಾಜಿಯವರ ಬಳಿ ಶಿಷ್ಯವೃತ್ತಿಯನ್ನು ಸ್ವೀಕರಿಸಿದ್ದರು. ನಂತರದ ವರ್ಷಗಳಲ್ಲಿ ಗುರುವಿನ ಆಣತಿಯಂತೆ ಕಲ್ನಾ ಎಂಬ ಸ್ಥಳಕ್ಕೆ ಬಂದು ನೆಲೆಸಿದರು. ಎಂಬತ್ತು ವರ್ಷ ವಯಸ್ಸಿನ ಬಾಬಾಜಿಯವರ ದರ್ಶನಕ್ಕೆಂದು ಬಾಲಕಸಹಜ ಪ್ರವೃತ್ತಿಯ ಮೂವತ್ತುನಾಲ್ಕು ವರ್ಷದ ಶ್ರೀರಾಮಕೃಷ್ಣರು ಹೃದಯನೊಡನೆ ಬಂದರು. ಅನೇಕ ವರ್ಷಗಳ ಸಾಧನೆಯ ಫಲವಾಗಿ ಬಾಬಾಜಿ ಒಬ್ಬ ಶ್ರೇಷ್ಠ ಪುರುಷರೆಂದು ಗುರುತಿಸಿದರು. "ನೀವೇಕೆ ಇನ್ನೂ ಜಪಮಾಲೆ ತಿರುಗಿಸುತ್ತಿರುವಿರಿ? ಸತ್ಯಸಾಕ್ಷಾತ್ಕಾರವಾದ ನಿಮಗೆ ಅದರ ಅವಶ್ಯಕತೆ ಏನಿದೆ?' ಎಂಬ ಹೃದಯನ ಪ್ರಶ್ನೆಗೆ ಮನದಲ್ಲೇ ಹರ್ಷಿಸುತ್ತಾ, ಪ್ರಸನ್ನಚಿತ್ತರಾಗಿ ಬಾಬಾಜಿ ಉತ್ತರಿಸಿದರು, "ಇದು ನನಗಾಗಿ ಅಲ್ಲ, ಜನರಿಗೆ ಶಿಕ್ಷಣ ನೀಡಲೋಸುಗ. ಇಲ್ಲದಿದ್ದರೆ ಜನ ನನ್ನನ್ನು ಅನುಸರಿಸಿ ತಪ್ಪು ದಾರಿ ಹಿಡಿಯುತ್ತಾರೆ" ಎಂದು. ಇದನ್ನು ಕೇಳಿದೊಡನೆ ಕೋಪ ಉಕ್ಕಿ ಬಂದ ಶ್ರೀರಾಮಕೃಷ್ಣರು ಭಾವದಲ್ಲಿ ಎದ್ದು ನಿಂತು, "ಏನು? ಈಗಲೂ ನಿನ್ನಲ್ಲಿ ಇಷ್ಟೊಂದು ಅಹಂಕಾರವೇ? ಇತರರಿಗೆ ಶಿಕ್ಷಣ ನೀಡುವೆಯೋ? ನೀನಾರು ಶಿಕ್ಷಣ ನೀಡಲು ? ಈ ಜಗತ್ತು ಯಾರಿಗೆ ಸೇರಿದೆಯೋ ಆತ ಇಚ್ಛಿಸದಿದ್ದರೆ ನೀನು ಶಿಕ್ಷಣ ನೀಡಲು ಸಾಧ್ಯವೋ?" ಎಂದು ಗುಡುಗಿದರು. ನಂತರ ಕಣ್ಣು ಮಿಟುಕಿಸುವುದರೊಳಗೆ ಸಮಾಧಿಸ್ಥರಾದರು. ಒಂದು ಕ್ಷಣದ ಹಿಂದೆ ಕೋಪದಿಂದ ಗುಡುಗಿದ ಶ್ರೀರಾಮಕೃಷ್ಣರು ಈಗ ಬಾಹ್ಯಪ್ರಪಂಚದ ಅರಿವೇ ಇಲ್ಲದಂತೆ ದಿವ್ಯಾನಂದವನ್ನು ಹೊರಸೂಸುತ್ತಾ ನಿಂತಿದ್ದನ್ನು ನೋಡಿ ಬಾಬಾಜಿ ಆಶ್ಚರ್ಯಚಕಿತರಾದರು.

ಬಾಬಾಜಿಗೆ ಇದೊಂದು ಹೊಸ ಅನುಭವ. ಏಕೆಂದರೆ ಇಲ್ಲಿಯವರೆಗೆ ಎಲ್ಲರಿಂದಲೂ ಪ್ರಶಂಸೆ, ಗೌರವಗಳನ್ನೇ ಸ್ವೀಕರಿಸುತ್ತಿದ್ದ ಅವರಿಗೆ ಈಗ ಎಲ್ಲರೆದುರು ಆದ ಈ ಅಪಮಾನ ಹೃದಯವನ್ನು ಕತ್ತಿಯಿಂದ ತಿವಿದಂತಾಯಿತು. ಆದರೆ ಅಷ್ಟು ವರ್ಷಗಳ ದೀರ್ಘ ಸಾಧನೆಯ ಪರಿಣಾಮವಾಗಿ ಸಾಮಾನ್ಯರಂತೆ ಉದ್ರೇಕಕ್ಕೆ ಒಳಗಾಗಲಿಲ್ಲ. ಶ್ರೀರಾಮಕೃಷ್ಣರ ತೀಕ್ಷ್ಣ ನುಡಿಗಳು ತಾತ್ಕಾಲಿಕವಾಗಿ ಅಹಂಕಾರದಿಂದ ಮುಚ್ಚಿದ್ದ ಅವರ ಒಳಗಣ್ಣನ್ನು ತೆರೆದವು. ತಾವು ಇದುವರೆಗೂ ಶಾಸ್ತ್ರಗಳಲ್ಲಿ ಓದಿದ್ದ ಭಾವಸಮಾಧಿಯನ್ನು ಕಣ್ಣಾರೆ ವೀಕ್ಷಿಸುವ ಸೌಭಾಗ್ಯವು ಪ್ರಥಮ ಬಾರಿಗೆ ಅವರಿಗೆ ಒದಗಿತು. ಈ ದೃಶ್ಯವು ಬಾಬಾಜಿಗೆ ಶ್ರೀಚೈತನ್ಯರ ಸ್ಮರಣೆಯನ್ನು ತಂದಿತು. ಜೊತೆಜೊತೆಗೆ ಕೊಲುತಾಲಾದ ಹರಿಸಭೆಯಲ್ಲಿ ಚೈತನ್ಯನ ಆಸನವನ್ನು ಆಕ್ರಮಿಸಿದವರು ಇವರೇ ಎಂಬುದು ನಂತರ ವಿಚಾರಿಸಿದಾಗ ತಿಳಿಯಿತು. ನಡೆದುದೆಲ್ಲವೂ ಕ್ಷಣಾರ್ಧದಲ್ಲಿ ಅವರ ಸೂಕ್ಷ್ಮಬುದ್ಧಿಗೆ ಗೋಚರಿಸಿತು. ತಮ್ಮ ತಪ್ಪಿನ ಅರಿವಾಗಿ ಹೃದಯನ ಬಳಿ ಹೀಗೆಂದು ವಿಲಾಪಿಸತೊಡಗಿದರು, "ಅಯ್ಯೋ! ಎಂತಹ ಘೋರ ಅಪರಾಧವನ್ನೆಸಗಿರುವೆ. ಇವರ ಮಹಿಮೆಯನ್ನು ಅರಿಯದೆ ಹೀನಾಯವಾಗಿ ಮಾತನಾಡಿದೆ. ಅವರು ಕ್ಷಮಿಸದಿದ್ದರೆ ನನ್ನ ಗತಿಯೇನಾಗುವುದು?" ಅವರ ಕಳಕಳಿ ಕಂಡ ಹೃದಯನು ಅವರನ್ನು ಸಮಾಧಾನ ಪಡಿಸುತ್ತಿದ್ದ ಹಾಗೆಯೇ ಶ್ರೀರಾಮಕೃಷ್ಣರು ನಿಧಾನವಾಗಿ ಪ್ರಜ್ಞಾವಸ್ಥೆಗೆ ಬಂದರು. ತಕ್ಷಣವೇ ಬಾಬಾಜಿ ಏಳು ಬಾರಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ತಮ್ಮ ತಪ್ಪನ್ನು ಮನ್ನಿಸಿರೆಂದು ದೀನರಾಗಿ ವಿನಂತಿಸಿಕೊಂಡರು. ನಂತರ ಅವರಿಗೆ ಸಿಹಿತಿಂಡಿಗಳನ್ನು ತಿನ್ನಿಸಿದರು. ಬಹಳ ಹೊತ್ತು ಇಬ್ಬರೂ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದರು. ಶ್ರೀರಾಮಕೃಷ್ಣರು ಹಿಂತಿರುಗಿದಾಗ ರಾತ್ರಿ ಹತ್ತು ಘಂಟೆ.

ಮಾರನೇ ದಿನ ಶ್ರೀರಾಮಕೃಷ್ಣರು ಮಥುರನ ಬಳಿ ಬಾಬಾಜಿ ಯನ್ನು ಶ್ಲಾಘಿಸುತ್ತಾ 'ನಾಮಬ್ರಹ್ಮಾಶ್ರಮ' ದಲ್ಲಿ ವಿಶೇಷ ಪೂಜೆ ಹಾಗೂ ಹಬ್ಬದೂಟದ ಏರ್ಪಾಡು ಮಾಡಿಸಿದರು. ಈ ಭೇಟಿಯು ಬಾಬಾಜಿಯವರಲ್ಲಿ ಒಂದು ದೊಡ್ಡ ಪರಿವರ್ತನೆಯನ್ನೇ ತಂದಿತು. ಇದರಿಂದ ಶ್ರೀರಾಮಕೃಷ್ಣರು ವೈಷ್ಣವ ಪಂಥದಲ್ಲೇ ಆದರಣೀಯ ವ್ಯಕ್ತಿಯಾದರು. ಹದಿನಾಲ್ಕು ವರ್ಷಗಳ ನಂತರ ಮಾಸ್ಟರ್ ಮಹಾಶಯ ಬಾಬಾಜಿಯವರನ್ನು ಸಂದರ್ಶಿಸಿ ಬಂದ ಮೇಲೆ ಶ್ರೀರಾಮಕೃಷ್ಣರಿಗೆ ಹೀಗೆ ಹೇಳುತ್ತಾರೆ: "ಅವರಿಗೆ ಈಗ ಬಹಳ ವಯಸ್ಸಾಗಿದೆ. ಅವರನ್ನು ನಾನು ಕಲ್ನಾದಲ್ಲಿ ಭೇಟಿ ಮಾಡಿದೆ. ಆಗ ಬಹಳ ರಾತ್ರಿಯಾಗಿತ್ತು. ಅವರೊಂದು ನೆಲಗಂಬಳಿಯ ಮೇಲೆ ಮಲಗಿದ್ದರು ಮತ್ತು ಭಕ್ತರೊಬ್ಬರು ಅವರಿಗೆ ದೇವರ ಪ್ರಸಾದವನ್ನು ತಿನ್ನಿಸುತ್ತಿದ್ದರು. ಬಹಳ ಜೋರಾಗಿ ಕಿವಿಯ ಬಳಿ ಮಾತನಾಡಿದರೆ ಮಾತ್ರ ಕೇಳಿಸುತ್ತಿತ್ತು. ನಿಮ್ಮ ಹೆಸರನ್ನು ನಾನು ಹೇಳಿದ ಕೂಡಲೇ, 'ನೀವಿನ್ನೇನೂ ಯೋಚನೆ ಮಾಡಬೇಕಾಗಿಲ್ಲ' ಎಂದರು."

## ವಿಲಿಯಮ್ಸ್

ನವೆಂಬರ್ ೧೮೭೪ ರಲ್ಲಿ ಪ್ರಥಮ ಬಾರಿ ಶ್ರೀರಾಮಕೃಷ್ಣರು ಶಂಭುಚರಣ ಮಲ್ಲಿಕನಿಂದ ಬೈಬಲ್ ಓದಿಸಿ ಆಲಿಸಿದರು. ಅದನ್ನು ಕೇಳಿದಾಗಿನಿಂದ ಅವರ ಮನಸ್ಸು ಮೂರು ದಿನಗಳ ಕಾಲ ಕ್ರಿಸ್ತಭಾವದಿಂದ ತುಂಬಿಹೋಯಿತು. ಇಂತಹ ಒಂದು ದಿನ ಯದು ಮಲ್ಲಿಕನ ತೋಟದ ಮನೆಯಲ್ಲಿ ಅವರಿಗೆ ಕ್ರಿಸ್ತನ ದರ್ಶನವಾದುದಲ್ಲದೆ, ಆತನು ತನ್ನೊಳಗೆ ಐಕ್ಯವಾದಂತೆಯೂ ಅವರಿಗೆ ಭಾಸವಾಯಿತು. ಮುಂದೆ ಅನೇಕ ಕ್ರೈಸ್ತರು ಶ್ರೀರಾಮಕೃಷ್ಣರಲ್ಲಿ

ಕ್ರಿಸ್ತನ ದರ್ಶನವನ್ನು ಪಡೆದರು. ಅಂತಹವರಲ್ಲಿ ಒಬ್ಬನಾದ ಶಾಲಾ ಅಧ್ಯಾಪಕ ವಿಲಿಯಮ್ಸ್, ಬೈಬಲನ್ನು ಆಳವಾಗಿ ಅಧ್ಯಯನ ಮಾಡಿದವನು. ಕೇಶವಚಂದ್ರಸೇನನು 'ದಿ ಇಂಡಿಯನ್ ಮಿರರ್' ನಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಪ್ರಚಾರಮಾಡಲು ಪ್ರಾರಂಭಿಸಿದ ನಂತರ ಬ್ರಾಹ್ಮ ಸಮಾಜದ ಭಕ್ತರಿಗೆಲ್ಲ ಶ್ರೀರಾಮಕೃಷ್ಣರು ಸುಪರಿಚಿತರಾದರು. ಇವರ ಸಂಪರ್ಕದಿಂದ ಬ್ರಾಹ್ಮ ಉಪದೇಶಕ ಕೇದಾರನಾಥ ಚಟರ್ಜಿಯಲ್ಲಿ ಬಹಳವಾಗಿ ಪರಿವರ್ತನೆಯಾದುದನ್ನು ಕಂಡ ವಿಲಿಯಮ್ಸ್ ಶ್ರೀರಾಮಕೃಷ್ಣರನ್ನು ಭೇಟಿಯಾಗಲು ಕಾತರಿಸತೊಡಗಿದ. ಕೊನೆಗೊಂದು ದಿನ ದೀರ್ಘ ಪ್ರಯಾಣ ಕೈಗೊಂಡು ಭಾರತದ ವಾಯುವ್ಯ ದಿಕ್ಕಿನಿಂದ ಕೊಲ್ಕತಾಗೆ ಬಂದನು. 'ಗುಡ್ ಫ್ರೈಡೇ' ಇನ್ನು ಕೆಲವೇ ದಿನಗಳಿದ್ದ ಕಾರಣ ಪ್ರಥಮ ಸಮಾಗಮವು ಆ ಪವಿತ್ರ ದಿನವೇ ಆಗಲೆಂದು ಕಾಯುತ್ತಿದ್ದನು.

ಬಹಳ ವರ್ಷಗಳಿಂದ ಕಾಯುತ್ತಿದ್ದ ಈ ಶುಭ ದಿನ ಕೂಡಿ ಬಂದಿತು. ಕ್ರಿ.ಶ. ೧೮೮೧ ರ 'ಗುಡ್ ಫ್ರೈಡೇ' ದಿನ ಮಧ್ಯಾಹ್ನ ಒಂದು ಗಂಟೆಗೆ ವಿಲಿಯಮ್ಸ್ ಕೇದಾರನಾಥ ಚಟರ್ಜಿಯೊಡನೆ ದಕ್ಷಿಣೇಶ್ವರಕ್ಕೆ ಬಂದನು. ನಸುಗೆಂಪು ಬಣ್ಣದ, ಬಟ್ಟಲುಗಣ್ಣಗಳ, ಆಜಾನುಬಾಹುವಾಗಿದ್ದ ಮಧ್ಯವಯಸ್ಸಿನ ವಿಲಿಯಮ್ಸ್ ಬೂಟ್ಸು ಹಾಗೂ ಟೋಪಿಯನ್ನು ತೆಗೆದು, ನಮ್ರತೆಯಿಂದ ಕೈಮುಗಿದು ಕೊಠಡಿಯ ಮುಂದೆ ನಿಂತನು. ಕೆಲವು ಭಕ್ತರೊಡನೆ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದರು. ಆಗಂತುಕನೊಬ್ಬ ಬಂದಿದ್ದಾನೆ ಎಂಬ ಸುದ್ದಿ ಕೇಳಿದೊಡನೆ ಶ್ರೀರಾಮಕೃಷ್ಣರಲ್ಲಿ ಒಂದು ಅದ್ಭುತ ಮಾರ್ಪಾಡಾಯಿತು. ಅವರ ಮನಸ್ಸು ಆಧ್ಯಾತ್ಮಿಕ ಭಾವದಿಂದ ತುಂಬಿಹೋಯಿತು. ತಮ್ಮ ಮೇಲೆ ನಿಗ್ರಹವೇ ಇಲ್ಲವೇನೋ ಎಂಬಂತೆ ಹೊಸ ಅತಿಥಿಯನ್ನು ಸ್ವಾಗತಿಸಲು ಆತುರ, ಕಾತರಗಳಿಂದ ಕೊಠಡಿಯ ಹೊರಗೆ ಬಂದರು. ಅವರುಟ್ಟಿದ್ದ ಪಂಚೆಯು ಜಾರಿ ಒಂದು ತುದಿ ನೆಲವನ್ನು ಗುಡಿಸುತ್ತಿತ್ತು. ಅದರ ಪರಿವೆಯೇ ಅವರಿಗಿರಲಿಲ್ಲ.

ಶ್ರೀರಾಮಕೃಷ್ಣರು ಬಂದ ತಕ್ಷಣ ವಿಲಿಯಮ್ಸ್ ಎರಡೂ ಕೈಮುಗಿದು ಮಂಡಿಯೂರಿ ಕುಳಿತು ಅವರ ಮುಖವನ್ನೇ ದಿಟ್ಟಿಸಿ ನೋಡತೊಡಗಿದನು. ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ಸಂತನ ಪಾದಗಳನ್ನು ಭಕ್ತಿಯಿಂದ ಚುಂಬಿಸಿ, ಆನಂದಾಶ್ರುಗಳಿಂದ ತೊಳೆದನು. ಕೂಡಲೇ ಸಮಾಧಿಸ್ಥರಾದ ಶ್ರೀರಾಮಕೃಷ್ಣರ ಮುಖದಿಂದ ದಿವ್ಯಾನಂದ ಎಲ್ಲೆಡೆ ಸುಮ್ಮನೆ ಚಿಮ್ಮುತ್ತಿತ್ತು. ಭಕ್ತರೆಲ್ಲರೂ ಇವರಿಬ್ಬರ ಮಧ್ಯೆ ಏನು ನಡೆಯುತ್ತಿದೆ ಎಂದು ಅರ್ಥವಾಗದೆ ಆಶ್ಚರ್ಯಚಕಿತರಾಗಿ ಈ ದೇವದುರ್ಲಭ ದೃಶ್ಯವನ್ನು ವೀಕ್ಷಿಸುತ್ತಿದ್ದಾರೆ. ಪ್ರಜ್ಞಾವಸ್ಥೆಗೆ ಬಂದ ನಂತರ ಶ್ರೀರಾಮಕೃಷ್ಣರು ವಿಲಿಯಮ್ಸ್‌ನನ್ನು ಕೈಹಿಡಿದು ಕೊಠಡಿಗೆ ಕರೆತಂದರು. ನೆಲದ ಮೇಲೆ ಮಂದಲಿಗೆ ಹಾಸಿ ಆತನನ್ನು ಕುಳ್ಳಿರಿಸಿ, ತಾವು ಅದರ ಇನ್ನೊಂದು ತುದಿಯಲ್ಲಿ ಕುಳಿತು, "ನಮ್ಮಿಬ್ಬರ ನಡುವೆ ಒಂದು ಬೆರಳಷ್ಟು ಅಂತರವಿದೆ" ಎಂದರು. ಅದಕ್ಕೆ ಉತ್ತರವಾಗಿ ವಿಲಿಯಮ್ಸ್, "ಮಹಾಶಯರೆ, ನಮ್ಮಿಬ್ಬರ ಆಸನಗಳ ನಡುವೆ ಅಂತರವಿರಬಹುದು, ಆದರೆ ನನ್ನ ಹೃದಯ ನಿಮ್ಮ ಹೃದಯದೊಡನೆ ಈಗಾಗಲೇ ಒಂದಾಗಿಬಿಟ್ಟಿದೆ" ಎಂದು ವಿನಮ್ರನಾಗಿ ಹೇಳಿದನು.

ಭಗವಂತನ ನೇರ ದರ್ಶನ ಪಡೆಯಲು ಸಾಧ್ಯವೇ ಎಂಬುದನ್ನು ತಿಳಿಯಲೋಸುಗವೇ ವಿಲಿಯಮ್ಸ್ ಪರಮಹಂಸರ ಬಳಿಗೆ ಬಂದಿದ್ದನು. ಮೊದಲನೆಯ ಭೇಟಿಯಲ್ಲೇ ತನ್ನ ಊಹೆಗೂ ನಿಲುಕದ ಒಂದು ದಿವ್ಯ ಅನುಭವ ಅವನಿಗಾಯಿತು. ನಂತರ ಈ ಭೇಟಿಯ ಕುರಿತು ಭಕ್ತರ ಬಳಿ ತನಗೆ ಪ್ರಥಮ ನೋಟದಲ್ಲೇ ಪರಮಹಂಸರಲ್ಲಿ ಕ್ರಿಸ್ತನ ದರ್ಶನವಾಯಿತೆಂದು ಹೇಳಿದನು. ತಾನು ಒಬ್ಬ ಹಿಂದೂ ಸಂತನ ಬಳಿ ಬಂದಿರುವೆನೆಂಬುದನ್ನು ಆತ ಸಂಪೂರ್ಣವಾಗಿ ಮರೆತೇಬಿಟ್ಟನು. ಅಲ್ಲಿದ್ದ ಸಮಯವೆಲ್ಲ ಅನನ್ಯ ಭಕ್ತಿಯಿಂದ ಕೈಮುಗಿದುಕೊಂಡೇ ಕುಳಿತಿದ್ದನು. ಮಾತಿನ ನಡುವೆ ಶ್ರೀರಾಮಕೃಷ್ಣರು ಸಾಮಾನ್ಯವಾಗಿ ಹೊಸಬರಿಗೆ ಕೇಳುವಂತೆ, "ಒಳ್ಳೆಯದು, ನನ್ನ ಬಗ್ಗೆ ನಿನ್ನ ಅಭಿಪ್ರಾಯವೇನು? ನಾನಾರು?" ಎಂದು ಕೇಳಿದರು. ಸಾಮಾನ್ಯವಾಗಿ ಇಂತಹ ಪ್ರಶ್ನೆಯನ್ನು ಕೇವಲ ನಿಷ್ಠಾವಂತ ಸಾಧಕರಿಗೆ ಕೇಳುತ್ತಿದ್ದರು. ಮೇಲಿನ ಪ್ರಶ್ನೆಗೆ ವಿಲಿಯಮ್ಸ್ ಸ್ಫೂರ್ತಿಭರಿತನಾಗಿ, "ಮಹಾಶಯರೆ, ತಾವು ಸಾಕ್ಷಾತ್ ಕ್ರಿಸ್ತ, ದೇವರ ಮಗ, ಸಚ್ಚಿದಾನಂದ ಸ್ವರೂಪ" ಎಂದು ಭಕ್ತಿಯ ಆವೇಶದಿಂದ ನುಡಿದನು. ಕ್ರೈಸ್ತನಾದ ವಿಲಿಯಮ್ಸ್ ಹೀಗೆ ಉತ್ತರಿಸಬೇಕಾದರೆ ಶ್ರೀರಾಮಕೃಷ್ಣರಲ್ಲಿ ಅವನಿಗೆ ಅಂಥ ದರ್ಶನವಾಗಿರಲೇಬೇಕು.

ಮೊದಲನೆಯ ಭೇಟಿಯಲ್ಲಿಯೇ ಶ್ರೀರಾಮಕೃಷ್ಣರು ಅತ್ಯಂತ ಶ್ರೇಷ್ಠ ವ್ಯಕ್ತಿ ಮತ್ತು ಅವರು ಪ್ರತಿಯೊಂದು ನುಡಿಯನ್ನು ಅನುಭವದ ಅಧಿಕಾರವಾಣಿಯಿಂದ ಹೇಳುವವರು ಎಂಬುದು ವಿಲಿಯಮ್ಸ್‌ನ ಮನಸ್ಸಿಗೆ ದೃಢವಾಯಿತು. ಆತನನ್ನು ಬೀಳ್ಕೊಡುವಾಗ ಶ್ರೀರಾಮಕೃಷ್ಣರು ಮತ್ತೊಮ್ಮೆ ಬರಲು ಆಹ್ವಾನ ನೀಡಿದರು. ಅವರ ಮನಮುಟ್ಟುವ ಮಾತು, ಆ ಸುಂದರ ಮುಖಭಾವ – ಇವೆಲ್ಲವೂ ಅವನಲ್ಲಿ ಎಂತಹ ಗಾಢವಾದ ಪರಿಣಾಮವನ್ನು ಉಂಟುಮಾಡಿತೆಂದರೆ ವಿಲಿಯಮ್ಸ್ ಕೂಡಲೇ ಮತ್ತೆ ಬರಲು ಒಪ್ಪಿಕೊಂಡ. ಮುಂದಿನ ಭೇಟಿಗಳು (ಬಹುಶಃ ಎರಡಕ್ಕಿಂತಲೂ ಹೆಚ್ಚು) ವಿಲಿಯಮ್ಸ್‌ನ ಆಧ್ಯಾತ್ಮಿಕ ಜೀವನದಲ್ಲಿ ಗಾಢವಾದ ಪರಿವರ್ತನೆಯನ್ನು ಉಂಟುಮಾಡಿತೆಂದು ಮತ್ತೆ ಹೇಳಬೇಕಿಲ್ಲ.

ಕೆಲವು ವರ್ಷಗಳ ನಂತರ ವಿಲಿಯಮ್ಸ್ ತಾಂಥಾನಿಯಾ ಎಂಬಲ್ಲಿರುವ ದೇವಾಲಯದಲ್ಲಿ ಸಿದ್ಧೇಶ್ವರಿ (ಕಾಳಿ) ವಿಗ್ರಹದ ಮುಂದೆ ತಲೆಬಾಗಿ ನಮಸ್ಕರಿಸುವುದನ್ನು ಕಂಡು ಬೆರಗಾದ ರಾಮಕೃಷ್ಣ ದತ್ತನಿಗೆ ಅವನು ಹೀಗೆ ಉತ್ತರ ಕೊಟ್ಟನು: 'ನಾನು (ಕಾಳಿಯ) ವಿಗ್ರಹದಲ್ಲಿ ಕ್ರಿಸ್ತನನ್ನು ನೋಡಿದೆ. ಶ್ರೀರಾಮಕೃಷ್ಣರು ನನ್ನ ಪೂರ್ವಾಗ್ರಹಗಳನ್ನೆಲ್ಲಾ ಚೂರುಚೂರು ಮಾಡಿ ಹೊಸ ದೃಷ್ಟಿಕೋನವನ್ನು ದಯಪಾಲಿಸಿದ್ದಾರೆ. ಅವರ ಕೃಪಾಶೀರ್ವಾದಗಳಿಂದ ಹಿಂದೆ ಕಾಣದ, ಅರ್ಥವಾಗದ ವಿಚಾರಗಳನ್ನೆಲ್ಲ ಈಗ ಹೊಸ ಬೆಳಕಿನಲ್ಲಿ ನಾನು ಕಾಣುತ್ತಿರುವೆ. ವಿಗ್ರಹಗಳನ್ನು ದ್ವೇಷಿಸುವ ನಾವೆಂಥ ಮೂರ್ಖರು ಎಂದು ಈಗ ಒಮ್ಮೊಮ್ಮೆ ಅನಿಸುತ್ತಿದೆ. ಆದರೆ ಸೌಭಾಗ್ಯವಶಾತ್ ಶ್ರೀರಾಮಕೃಷ್ಣರು ನನಗೆ ನವಜೀವನವನ್ನು ದಯಪಾಲಿಸಿದ್ದಾರೆ." ಮುಂದೆ ಶ್ರೀರಾಮಕೃಷ್ಣರ ಆದೇಶದಂತೆ ತ್ಯಾಗಜೀವನವನ್ನು ಆರಿಸಿಕೊಂಡ ವಿಲಿಯಮ್ಸ್ ಪಂಜಾಬಿನ ಉತ್ತರ ಭಾಗದ ಹಿಮಾಲಯದಲ್ಲಿ ತೀವ್ರ ತಪಸ್ಸಿನಲ್ಲಿ ಜೀವನ ಕಳೆದನೆಂದು ಸ್ವಾಮಿ ಶಾರದಾನಂದರು ಬರೆದಿದ್ದಾರೆ. *(ಮುಂದುವರಿಯುವುದು)*